दक्षिण भारत हिन्दी प्रचार सभा, मद्रास
दि. 21 फरवरी, 2021

# राष्ट्रभाषा प्रवीण पूर्वार्द्ध–3
# RASHTRABHASHA PRAVEEN POORVARDH–3

**समय : 3 घंटे]** **[पूर्णांक : 100**

**विशेष सूचना :–** इसमें तमिल, मलयालम, तेलुगु, कन्नड़ और मराठी – इन पाँच भाषाओं के प्रश्न-पत्र अलग-अलग खण्डों में दिये गये हैं। परीक्षार्थी अपनी भाषा का खण्ड चुन लें और उत्तर दें।

## कन्नड

**1.** ಬೇಕಾದ ಎರಡು ಪದ್ಯಗಳ ಭಾವಾರ್ಥವನ್ನು ಬರೆಯಿರಿ : **20**

ಅ. ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು
ಪರಿಣಾಮವಕ್ಕು ಕೈಲಾಸ
ನೆರೆಮನೆಯು ಅಕ್ಕು ಸರ್ವಜ್ಞ
ನಿಮ್ಮ ಮನೆಯ ಮಗನೆಂದೆನಿಸಯ್ಯ.

ಆ. ಖಡಕೀಲೆ ಉಡಿಯಕ್ಕಿ ಹಾಕಿದರವ್ವಾ । ಒಳ್ಳೆ
ದುಡುಕಿಲೆ ಮುಂದಕೆ ನೂಕಿದರವ್ವಾ
ಮಿಡಿಕ್ಕಾಡಿ ಮದಿವ್ಯಾದಿ ಮೋಜುಕಾಣವ್ವ । ಮುಂದ
ಹುಡಕ್ಕಾಡಿ ಮಾಯದ ಮರವೇರಿದೆವ್ವಾ
ಅಳಬೇಡ .......................

ಇ. ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆನವ್ವ
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗಾನೊಲಿದೆನವ್ವ
ಭವವಿಲ್ಲದ ಭಯವಿಲ್ಲದ ನಿಸ್ಸೀಮ ಚೆಲುವಾಂಗಾನೊಲಿದೆ
ಇದು ಕಾರಣ ಚನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ.

ಈ. ನಾನು ಎಂಬದ ಬಿಟ್ಟು ಜ್ಞಾನಿಗಳೊಡಗೂಡಿ
ಏನಿಲ್ಲಕೆ ದೇವ ಪ್ರೇರಣೆಯೆಂದು
ಧ್ಯಾನಿಸಿ ಮೌನದಿ ಪುರಂದರ ವಿಠಲನ
ಕಾಣದೆ ಮಾಡಿದ ಕಾರ್ಯಗಳೆಲ್ಲವು.

**2.** ಬೇಕಾದ ಇಬ್ಬರು ಕವಿಗಳನ್ನು ಕುರಿತು ಟಿಪ್ಪಣಿ ಬರೆಯಿರಿ : **20**

ಅ. ಡಾ. ಕೆ.ಬಿ. ಬ್ಯಾಳಿ
ಆ. ಗವಿಸಿದ್ಧ ಎನ್. ಬಳ್ಳಾರಿ
ಇ. ಈಶ್ವರ ಸಣಕಲ್ಲ
ಈ. ಅಲ್ಲಮಪ್ರಭು

**3.** ಬೇಕಾದ ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : **20**

ಅ. ಕಾವ್ಯಾನಂದರ ಪ್ರಕಾರ 'ಸೃಷ್ಟಿ' ಏನೆಂದು ಸಾರುತ್ತದೆ?
ಆ. 'ಉದರ ವೈರಾಗ್ಯವಿದು ....' ಪುರಂದರದಾಸರ ಈ ಪದದಲ್ಲಿ ಅಭಿವ್ಯಕ್ತವಾಗಿರುವ ಮನುಷ್ಯನ ಮನೋವೃತ್ತಿಯನ್ನು ವಿವರಿಸಿ.
ಇ. ಭಾರತ ಮಾತೆಯ ಕರೆಗೆ ವೀರ ಸೈನಿಕರು ಏನೆಂದರು?

**4.** ಬೇಕಾದ ಎರಡು ವಾಕ್ಯಗಳನ್ನು ಸಂದರ್ಭದೊಡನೆ ಸ್ಪಷ್ಟೀಕರಿಸಿರಿ : **20**

ಅ. "ಅಯ್ಯೋ; ಅದಕ್ಕೇನ್ಬುದ್ಧೀ – ಪರವಾ ಇಲ್ಲ. ಆಕೆ ಯಜಮಾನ್ರ ಮಗಳು."
ಆ. "ಅದೂ ಸಾದ್ಯವಿರಲಿಲ್ಲ. ಬೆಂಕಿಯು ಸಿಕ್ಕುವಂತಿರಲಿಲ್ಲ. ಬೆಂಕಿಪೆಟ್ಟಿಗೆಯೂ ಸಿಕ್ಕುವಂತಿರಲಿಲ್ಲ."
ಇ. "ಏನು ಹೇಳೋದಪ್ಪ ನನ್ನ ಜನ್ಮ ಯಾರಿಗೂ ಬ್ಯಾಡದೀರ ಹೇಯಿತೇ"
ಈ. "ಚೆನ್ನಮ್ಮಾ, ನಿನ್ನ ಭಾಗದ ದೇವರೇ ನಿನ್ನನ್ನು ಕಾಪಾಡಬೇಕು."

**5.** ಬೇಕಾದ ಒಂದನ್ನು ಕುರಿತು ಸವಿಸ್ತಾರವಾಗಿ ಬರೆಯಿರಿ : **20**

ಅ. "ನಾಲ್ಕು ಮೊಳ ಭೂಮಿ" ಈ ಕಥೆಯನ್ನು ನಿಮ್ಮ ವಾಕ್ಯಗಳಲ್ಲಿ ಬರೆಯಿರಿ.
ಆ. ಲೇಖಕರು ಯಾವುದನ್ನು "ರಕ್ತ ಸರೋವರ" ವೆಂದು ವರ್ಣಿಸುತ್ತಾರೆ - ಸ್ಪಷ್ಟೀಕರಿಸಿರಿ.
ಇ. 'ಯಾರೂ ಅರಿಯದ ವೀರ' ಸ್ತ್ರೀಸಾಮಾನ್ಯನಲ್ಲಿಯಾ ವ್ಯಕ್ತವಾಗಬಹುದಾದ ಅಸಾಮಾನ್ಯ ಕೃತಜ್ಞತೆ ಹಾಗೂ ತ್ಯಾಗವನ್ನು ಚಿತ್ರಿಸುವ ಕತೆ ಯಾಗಿದೆ– ಹೇಗೆ?